


# ಬನಶಂಕರಿ ದೇವಾಂಗ ಸಂಘ (ರಿ)

(ನಂ. 350/82-83)

ನಂ.383, 'ಬನಶ್ರೀ ಭವನ', 7ನೇ 'ಬಿ' ಅಡ್ಡ ರಸ್ತೆ, ವಿನಾಯಕ ಬಡಾವಣೆ,
ನಾಗರಭಾವಿ 2ನೇ ಹಂತ, ಬೆಂಗಳೂರು-560072.

www.banashankaridevangasangha.org Email : banashankari.ds@gmail.com




ದಿನಾಂಕ:21-08-2019

## ಮನವಿ

**ವಿಷಯ: ನೆರೆ ಪೀಡಿತ ದೇವಾಂಗ ಕುಲಬಾಂಧವರಿಗೆ ಸಹಾಯ ಕುರಿತು.**

ಉತ್ತರ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಮಳೆ ಮತ್ತು ಪ್ರವಾಹದಿಂದಾಗಿ ಅಪಾರ ಸಂಪತ್ತು ಹಾನಿಯಾಗಿದೆ ಮತ್ತು ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಬೆಳಗಾವಿ, ರಾಮದುರ್ಗ, ಮುನವಳ್ಳಿ, ಸುರೇಬಾನ, ಮತ್ತು ಕಮತಗಿ ಮುಂತಾದ ಊರುಗಳಲ್ಲಿ ಸಾಮಾನ್ಯ ಜನ, ಅದರಲ್ಲೂ ನಮ್ಮ ಕುಲ ಬಾಂಧವರು ಆಸ್ತಿ-ಪಾಸ್ತಿ ಕಳೆದುಕೊಂಡು ಮುಂದಿನ ಜೀವನ ನಿರ್ವಹಣೆ ನಡೆಸುವುದು ದುಸ್ತರವಾಗಿದೆ. ಜರೂರು / ತುರ್ತು ಪರಿಸ್ಥಿತಿಯಲ್ಲಿ ಬೇಕಾದ ಸಹಾಯ ಸಿಕ್ಕಿದೆಯಾದರೂ ನೇಕಾರಿಕೆ ನೆಚ್ಚಿಕೊಂಡವರು ಪುನರುಜ್ಜೀವನಕ್ಕಾಗಿ ಪರದಾಡುತ್ತಿದ್ದಾರೆ. ಪ್ರವಾಹದಿಂದ ಮಗ್ಗಗಳು ಮತ್ತು ಕಚ್ಚಾ ಸಾಮಗ್ರಿಗಳು ಹಾನಿಯಾಗಿವೆ.

ಈ ಕಷ್ಟಕರ ಪರಿಸ್ಥಿತಿಯಲ್ಲಿ ನಾವು ಅವರ ಕಷ್ಟಕ್ಕೆ ಸ್ಪಂದಿಸಬೇಕಾಗಿದೆ. ಈ ನಿಟ್ಟಿನಲ್ಲಿ ದಿನಾಂಕ 18/8/2019 ರವಿವಾರದಂದು **ಬನಶಂಕರಿ ದೇವಾಂಗ ಸಂಘ**ದ ಪದಾಧಿಕಾರಿಗಳು ಮತ್ತು ಸದಸ್ಯರು ಮಹತ್ವದ ಸಭೆ ನಡೆಸಿದರು, ನೆರೆ ಪೀಡಿತ ಸಂತ್ರಸ್ತರನ್ನು ದೂರವಾಣಿ ಮೂಲಕ ಸಂಪರ್ಕಿಸಿ ಅವರಿಗೆ ಬೇಕಾಗುವ ನೆರವಿನ ಬಗ್ಗೆ ತಿಳಿದುಕೊಳ್ಳಲಾಯಿತು.

ಉತ್ತರ ಕರ್ನಾಟಕದ ನಮ್ಮ ದೇವಾಂಗ ಕುಲ ಬಾಂಧವರ ಈ ಪರಿಸ್ತಿತಿಯಲ್ಲಿ ಅವರಿಗೆ ಸಹಾಯ ನೀಡಿ ಅವರ ಬದುಕಿನಲ್ಲಿ ಭರವಸೆ ಮೂಡಿಸಬೇಕಾಗಿರುವುದು ನಮ್ಮ ಕರ್ತವ್ಯ ಮತ್ತು ಮಾನವೀಯತೆ ಎಂದು ಅಭಿಪ್ರಾಯ ವ್ಯಕ್ತವಾಯಿತು. ಸಭೆಯಲ್ಲಿ ಹಾಜರಿದ್ದ ಪದಾಧಿಕಾರಿಗಳು ಮತ್ತು ಸದಸ್ಯರು ಸಂತ್ರಸ್ತರ ನಿಧಿಗಾಗಿ 50000/- ರೂಪಾಯಿಗಳ ದೇಣಿಗೆಯನ್ನು ವಾಗ್ದಾನ ಮಾಡಿದ್ದಾರೆ. ಸಂಘದ ಸದಸ್ಯರಲ್ಲಿ ಮನವಿ ಮಾಡುವುದೇನೆಂದರೆ: ಈಗ ತಾವು ಸಲ್ಲಿಸಲಿರುವ ಈ ಧನ ರೂಪದ ದೇಣಿಗೆಯನ್ನು, ನೆರೆ ಸಂತ್ರಸ್ತರಿಗೆ ವಿತರಿಸಲಾಗುವುದು. ನೆರೆ ಪೀಡಿತ/ಮೆಲ್ಕಾಣಿಸಿದ ಊರುಗಳ ನಮ್ಮ ಸಮಾಜದ ಮುಖಂಡರ ಮತ್ತು ಹಿರಿಯರ ಸಹಕಾರದಿಂದ ನಮ್ಮ ಸಮಾಜದ ಸಂತ್ರಸ್ತರನ್ನು ಗುರುತಿಸಿ ನೇರವಾಗಿ ಅವರಿಗೆ ತಲುಪಿಸಲಾಗುವುದು. ಈ ಒಂದು ಉದಾತ್ತವಾದ ಕಾರ್ಯದಲ್ಲಿ ತಾವು ಉದಾರ ಮನಸ್ಸಿನಿಂದ ದೇಣಿಗೆಯನ್ನು ಸಲ್ಲಿಸಬೇಕೆಂದು ಕೋರಿಕೆ. ದೇಣಿಗೆಯನ್ನು ಸಲ್ಲಿಸಲು ಬ್ಯಾಂಕಿನ ಖಾತೆಯ ವಿವರಗಳು:

**ಹೆಸರು**:"ಬನಶಂಕರಿ ದೇವಾಂಗ ಸಂಘ". **ಬ್ಯಾಂಕ್**:ಸಿಂಡಿಕೇಟ ಬ್ಯಾಂಕ್, ರಾಜಾಜಿನಗರ, **S/B A/C NO**:04082150000104. **IFSC** :SYNB0000408. PhonePe/Google pay ಮುಖಾಂತರ ಪಾವತಿಸಲು ಮೊ.ನಂ:9482901131. ನಂತರ Transaction id/ UTR NO. ಮತ್ತು ಹೆಸರನ್ನು ಮೆಸೇಜ್ ಮಾಡಿ.

ಮೊಬೈಲ್ ನಂಬರ: 9986523331 (ಗೋಸಿ) & 9845014430 (ಪಂಚಾಕ್ಷರಿ).

ಅಧ್ಯಕ್ಷರು ಮತ್ತು ಪದಾಧಿಕಾರಿಗಳು,
ಬನಶಂಕರಿ ದೇವಾಂಗ ಸಂಘ, ಬೆಂಗಳೂರು.